**ಕೋವಿಡ್–19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಸಿಬಿಆರ್/ಸಿಬಿಐಡಿ ಕಾರ್ಯಕರ್ತರಿಗೆ (ವೃತ್ತಿನಿರತ ಮತ್ತು ಸ್ವಯಂಸೇವಕ ಕಾರ್ಯಕರ್ತರುಗಳನ್ನು ಒಳಗೊಂಡಂತೆ) ಕಾರ್ಯನಿರ್ವಹಿಸುವ ಸಲುವಾಗಿ ಮಾರ್ಗಸೂಚಿ**

1. **ಕೋವಿಡ್–19 ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ಸಿಬಿಆರ್/ಸಿಬಿಐಡಿ ಕಾರ್ಯಕರ್ತರು ಬಹಳ ಪ್ರಮುಖವಾದ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ.** ಇವರ ಈ ಕಾರ್ಯನಿರ್ವಹಣೆಯಿಂದಾಗಿಅಂಗವಿಕಲರು, ಅವರ ಕುಟುಂಬದ ಸದಸ್ಯರು ಮತ್ತು ಸಮುದಾಯದಲ್ಲಿನ ದುರ್ಬಲ ವರ್ಗಕ್ಕೆ ಸೇರಿದ ವೃದ್ಧರು ಅಥವಾ ನಿರಾಶ್ರಿತರು ಈ ಸಾಂಕ್ರಾಮಿಕ ರೋಗದಿಂದ ರಕ್ಷಣೆ ಮತ್ತು ನೆರವಿನ ಸಹಾಯ ಪಡೆಯಬಲ್ಲರು. ಈ ರೀತಿಯ ಕಾರ್ಯನಿರ್ವಹಣೆಯಿಂದಾಗಿಸಮುದಾಯವನ್ನುಸಂಪೂರ್ಣವಾಗಿಕೋವಿಡ್–19 ನಿಂದ ರಕ್ಷಸಿದಂತಾಗುತ್ತದೆ.

2. ಆಹಾರ, ನೀರು ಅಥವಾ ಔಷಧಿಗಳಂತಹ ಅಗತ್ಯತೆಗಳನ್ನ ಒದಗಿಸುವ ಉದ್ದೇಶದಿಂದ ಮಾತ್ರ ಸಿಬಿಆರ್/ಸಿಬಿಐಡಿ ಕಾರ್ಯಕರ್ತರು ಸಮುದಾಯವನ್ನು ಕಡ್ಡಾಯವಾಗಿ ಭೇಟಿಮಾಡಬೇಕು.ಈ ರೀತಿ ಭೇಟಿ ನೀಡುವ ಸಂದರ್ಭದಲ್ಲಿ ಕಾರ್ಯಕರ್ತರು ಕಡ್ಡಾಯವಾಗಿ ದೈಹಿಕ ಅಂತರವನ್ನು ಕಾಪಾಡಿಕೊಳ್ಳಬೇಕು. ಕುಟುಂಬ ಮತ್ತು / ಅಥವಾ ಸಮುದಾಯದ ಸದಸ್ಯರಿಗೆ ಮಾಹಿತಿ ನೀಡಲು, ಅವರ ಅಗತ್ಯತೆಗಳ ಕುರಿತಾದ ಮಾಹಿತಿ ಪಡೆಯಲು ಮತ್ತು ಅವರ ಅವಶ್ಯಕತೆಯನ್ನು ಪೂರೈಸಲು ಇರುವ ಮಾರ್ಗಗಳ ಕುರಿತು ಚರ್ಚಿಸಲು ಸಿಬಿಆರ್/ಸಿಬಿಐಡಿ ಕಾರ್ಯಕರ್ತರು ಅವರೊಂದಿಗೆ ನಿರಂತರವಾಗಿ ದೂರವಾಣಿಯ ಮೂಲಕ ಸಂಪರ್ಕದಲ್ಲಿ ಇರುವಂತೆ ಪ್ರೋತ್ಸಾಹಿಸಬೇಕು.

3. ಸಿಬಿಆರ್/ಸಿಬಿಐಡಿ ಕಾರ್ಯಕ್ರಮವು ಅಭಿವೃದ್ಧಿ ಪಡಿಸಿದಮತ್ತು ಪ್ರಸಾರ ಮಾಡುವ ಪ್ರಮುಖ ಮಾಹಿತಿಗಳು ಕಡ್ಡಾಯವಾಗಿ ಸ್ಥಳೀಯ ಸಂದರ್ಭ ಮತ್ತು ನಿಯಮಗಳನ್ನು ಆಧರಿಸಿರಬೇಕು ಮತ್ತು ಈ ಕೆಳಗಿನ ವ್ಯಕ್ತಿ ಕೇಂದ್ರಿತ ತುರ್ತು ಪೂರ್ವಸಿದ್ಧತಾ (ಪಿಸಿಇಪಿ) ಸಾಧನವನ್ನು ಆಧರಿಸಿರಬೇಕು.
   - ಕೋವಿಡ್–19ಗೆ ಸಂಬಂಧಿಸಿದಂತೆ ಸ್ಥಳೀಯವಾಗಿ ಇರುವ ಅಪಾಯ / ಅಡ್ಡಿ ಆತಂಕಗಳನ್ನು ತಿಳಿಯಿರಿ.
   - ಕೋವಿಡ್–19ಗೆಸಂಬಂಧಿಸಿದಂತೆ ಏನು ಮಾಡಬೇಕು ಮತ್ತು ಅಂಗವಿಕಲರು ಹಾಗೂ ಇತರೆ ದುರ್ಬಲ ವರ್ಗದ ಸದಸ್ಯರನ್ನು ಸೇರಿಸಲು ಯಾರೆಲ್ಲ ಜವಾಬ್ದಾರರು ಎನ್ನುವುದರ ಕುರಿತು ಸಮುದಾಯದ ಜೊತೆಗೂಡಿ ಕಾರ್ಯಯೋಜನೆಯನ್ನು ತಯಾರಿಸಬೇಕು.
   - ನಿಮ್ಮ ಸಮುದಾಯವನ್ನು ಪ್ರೇರೇಪಿಸಿ ಮತ್ತು ಸಿದ್ಧಗೊಳಿಸಿ.
   - ಈ ಸಂದರ್ಭದಲ್ಲಿ ಆಗುತ್ತಿರುವ ಬದಲಾವಣೆಯ ಬಗ್ಗೆ ಜಾಗೃತರಾಗಿರಿ ಮತ್ತು ನಿಮ್ಮ ಯೋಜನೆಯನ್ನು ಅವಶ್ಯಕತೆಗೆ ತಕ್ಕಂತೆ ಹೊಂದಿಸಿಕೊಳ್ಳಿ.
   - ಒಬ್ಬರನ್ನೊಬ್ಬರು ಗಮನಿಸಿ

Produced by Professor Sally Hartley (UK) and Balakrishna Venkatesh (India) with contributions from Christine Cornick, Alick Nyirenda and the Zambian CBR/CBID team, Abdul Busuulwa CAN (Uganda) Professor Gwynneth Lelewellyn (Australia) Elanie Marks (Geneva, WHO - ಭಾರತದ ಸಂದರ್ಭಕ್ಕೆ ತಕ್ಕಂತೆ ಹೊಂದಿಸಲಾಗಿದೆ).

ಈ ಮೇಲಿನ ಐದು ಅಂಶಗಳ ಆಧಾರದ ಮೇಲೆ ಸಮುದಾಯವನ್ನು ನಿರಂತರವಾಗಿ ದೂರವಾಣಿ/ಪತ್ರ/ಇಮೇಲ್ ಮೂಲಕ ಸಂಪರ್ಕಿಸುವಲ್ಲಿ ಕಾರ್ಯಕರ್ತರು ಈಗಾಗಲೇ ಜವಾಬ್ದಾರಿಯನ್ನು ಹೊಂದಿದ್ದಾರೆ.

4. ನಿಮ್ಮ ಸ್ಥಳೀಯ ಅಪಾಯ / ಅಡ್ಡಿ ಆತಂಕಗಳನ್ನು ತಿಳಿಯಿರಿ
ಸಮುದಾಯ ಕಾರ್ಯಕರ್ತರು ಸ್ಥಳೀಯ ಪರಿಸ್ಥಿತಿಯ ಬಗ್ಗೆ ಸಾಧ್ಯವಾದಷ್ಟು ಚಿರಪರಿಚಿತರಿರಬೇಕು. ಸರ್ಕಾರ ಜಾರಿಗೊಳಿಸಿರುವ ಎಲ್ಲಾ ನಿಯಮಗಳು ಮತ್ತು ಗೊತ್ತುಪಡಿಸಿರುವ ಅಭ್ಯಾಸಗಳು ತಮಗೆ ಪರಿಚಿತವಾಗಿರುವ ಕುರಿತು ಸಿಬಿಆರ್/ಸಿಬಿಐಡಿ ಕಾರ್ಯಕರ್ತರು ಖಚಿತ ಪಡಿಸಿಕೊಳ್ಳಬೇಕು.ಮತ್ತು ಸ್ಥಳಿಯ ಸರ್ಕಾರಿ ರಚನೆಯ ಸಹಯೋಗದ ಜೊತೆಗೂಡಿ ಅಂಗವಿಕಲರ ಅವಶ್ಯಕತೆಗಳನ್ನ ಯೋಜನೆಯಲ್ಲಿ ಸೇರಿಸುವುದು ಮತ್ತು ನಂತರದ ಕ್ರಮಕ್ಕೆ ಬೇಕಾದ ಕೆಲಸ ಮಾಡುವುದನ್ನು ಖಾತರಿ ಪಡಿಸಿಕೊಳ್ಳಬೇಕು.

5. ಸಮುದಾಯದ ಸದಸ್ಯರ ಜೊತೆಗೂಡಿ ಅಂಗವಿಕಲರಿಗೆ ಏನು ಮಾಡಬೇಕು ಮತ್ತು ಅದಕ್ಕೆ ಯಾರು ಜವಾಬ್ದಾರರು ಎಂಬ ಯೋಜನೆಯನ್ನು ತಯಾರಿಸಬೇಕು.– ಮೊದಲಿಗೆ ದೂರವಾಣಿ ಹೊಂದಿರುವ ಕುಟುಂಬಗಳು ಮತ್ತು ಸಮುದಾಯ ಸೇವೆ ಬಲ್ಲ ವ್ಯಕ್ತಿಗಳೊಂದಿಗೆ ಸೇರಿ ಯೋಜನೆಯನ್ನು ತಯಾರಿಸಬೇಕು.
ಅನುಷ್ಠಾನಗೊಳ್ಳುತ್ತಿರುವ ಸ್ಥಳೀಯ ಕಾರ್ಯತಂತ್ರಗಳಲ್ಲಿ ಅಂಗವಿಕಲ ವ್ಯಕ್ತಿಗಳ ಅಗತ್ಯತೆಗಳು ಪರಿಗಣಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ಪ್ರಯತ್ನಿಸಬೇಕು. ಈ ಕಾರ್ಯತಂತ್ರವು ವ್ಯಕ್ತಿಯ ಪರಿಸ್ಥಿಗೆ ಅನುಗುಣವಾಗಿ ವ್ಯತ್ಯಾಸವಾಗುತ್ತದೆ, ಉದಾಹರಣೆಗೆ

- ಕೋವಿಡ್–19 ಹೊಂದಿರುವವರು ತಮ್ಮ ಸಮುದಾಯದಲ್ಲಿ ಕಳಂಕಿತರಾಗಿಲ್ಲ ಎನ್ನುವುದನ್ನು ಖಚಿತಪಡಿಸಿ.
- ಎಲ್ಲಾ ಅಂಗವಿಕಲರು ಮತ್ತು ಅವರ ಕುಟುಂಬದ ಸದಸ್ಯರೊಂದಿಗೆ ನಿಕಟವಾಗಿ ಕೆಲಸ ನಿರ್ವಹಿಸುವುದರ ಮೂಲಕ ಅವರಿಗೆ ಅಗತ್ಯವಿರುವ ಆರೋಗ್ಯ (ಮಾನಸಿಕ ಆರೋಗ್ಯ ಸೇರಿದಂತೆ) / ಪುನರ್ವಸತಿ ಸೇವೆ ಮತ್ತು ಔಷಧಿಗಳು / ಹಾಗೂ ರಕ್ತವು ಅವರಿಗೆ ದೊರಕುತ್ತಿರುವ ಕುರಿತು ಖಚಿತ ಪಡಿಸಿಕೊಳ್ಳಿರಿ.
- ಅಂಗವಿಕಲರು / ಅವರ ಕುಟುಂಬಗಳು ಈಗಾಗಲೆ ಜಾರಿಯಲ್ಲಿರುವ ಸೇವೆಗಳನ್ನು (ಉದಾ – ಮಾಸಿಕ ನಿರ್ವಹಣಾ ಭತ್ಯೆ / ಪಿಂಚಣಿ)ಪಡೆಯುತ್ತಿರುವ ಬಗ್ಗೆಮತ್ತು ಕೋವಿಡ್–19 ಸಾಂಕ್ರಾಮಿಕ ರೋಗವನ್ನು ನಿಭಾಯಿಸಲು ಒದಗಿಸುತ್ತಿರುವ ಇತರ ಎಲ್ಲಾ ನೆರವುಗಳನ್ನು ಪಡೆಯುತ್ತಿರುವ ಬಗ್ಗೆ ಖಚಿತ ಪಡಿಸಿಕೊಳ್ಳಿ.
- ಅಂಗವಿಕಲರು ಮತ್ತು ದುರ್ಬಲ ಸದಸ್ಯರನ್ನು ಹಳ್ಳಿಯಲ್ಲಿ ಅಥವಾ ಸಮುದಾಯದ ಇತರ ಸದಸ್ಯರಿಂದ ಪ್ರತ್ಯೇಕಿಸಿ ಸಂರಕ್ಷಿಸುವುದು, ಆಹಾರ ಪೂರೈಕೆ / ಸರ್ಕಾರವು ನೀಡುತ್ತಿರುವ ಆಹಾರ ಪದಾರ್ಥಗಳೂ ಸಹ ಅಂಗವಿಕಲರಿಗೆ ತಲುಪುತ್ತಿವೆಅಥವಾ ಅವರಿಗಾಗಿ ಬೇಕಾದ

ವಸ್ತುಗಳನ್ನು ಖರೀದಿಸುತ್ತಿರುವುದರ ಕುರಿತು ಖಾತರಿ ಪಡಿಸಿಕೊಳ್ಳುವುದರ ಜೊತೆಗೆ ಕೋವಿಡ್–19 ಸೋಂಕಿನಿಂದ ಜನರನ್ನು ಮುಕ್ತವಾಗಿಡಲು ಮಾರ್ಗಸೂಚಿಯನ್ನು ಗಮನಿಸುವುದು.

- ಈಗಾಗಲೇ ವೈರಸ್ ಇರುವ ಜನರನ್ನು ಪ್ರತ್ಯೇಕಿಸುವುದು ಮತ್ತು ಇತರ ಸಮುದಾಯದ ಸದಸ್ಯರಿಂದ ದೂರದಲ್ಲಿರುವ ಒಂದುಪ್ರದೇಶದಲ್ಲಿ ಅವರಿಗೆ ಮತ್ತು ಅವರ ಕುಟುಂಬದ ಸದಸ್ಯರಿಗೆ ಯಾವುದೇ ತಾರತಮ್ಯವಿಲ್ಲದೇ ಮತ್ತು ಕಳಂಕಿತರನ್ನಾಗಿ ನೋಡದೆ ಆರೈಕೆ ಮಾಡುವುದು.
- ಸಂಪೂರ್ಣವಾಗಿ ಕೈತೊಳೆಯಲು ಅವರಿಗೆ ಶುದ್ಧ ನೀರು ಮತ್ತು ಸಾಬೂನನ್ನು ನಿರಂತರವಾಗಿ ನೀಡಬೇಕು
- ಅಂಗವಿಕಲರಿಗೆ ನೀರು ಮತ್ತು ಸಾಬೂನು ಸುಲಭವಾಗಿ ಸಿಗುವಂತಹ ಸ್ಥಳದಲ್ಲಿ ಇಡಬೇಕು
- ಹೊರಗೆ ಹೋಗುವಾಗ ಮತ್ತು ಜನಸಂದಣಿಯಿರುವ ಸ್ಥಳದಲ್ಲಿ ತಾವೇ ತಯಾರಿಸಿದ ಮುಖವಾಡವನ್ನು (ಮಾಸ್ಕ್) ಧರಿಸಬೇಕು.ಅವಶ್ಯಕತೆಗೆ ಅನುಗುಣವಾಗಿ ಹೊರಗೆ ಹೋಗುವುದನ್ನು ಖಚಿತ ಪಡಿಸಿಕೊಳ್ಳಬೇಕು.
- ದೈಹಿಕ ಅಂತರ (ಪ್ರಸ್ತುತ 2 ಮೀಟರ್ ಅಂತರ) ಮತ್ತು ಕೈತೊಳೆಯುವುದು – ಈ ಮಾಹಿತಿಯನ್ನು ಸ್ಪಷ್ಟವಾಗಿ ರವಾನಿಸಬೇಕು.
- ಯಾರಿಗಾದರೂ ಕೋವಿಡ್–19ರ ಸೋಂಕಿನ ಲಕ್ಷಣಗಳಿದ್ದರೆ ಸ್ಥಳೀಯ ನೀತಿಗಳಿಗೆ ಅನುಗುಣವಾಗಿ ಆರೋಗ್ಯ ಸೌಲಭ್ಯವನ್ನು ಪಡೆಯಲು ಸಂಪರ್ಕಿಸಬೇಕು.

6. ನಿಮ್ಮ ಸಮುದಾಯವನ್ನು ಪ್ರೇರೇಪಿಸಿ ಮತ್ತು ಸಿದ್ಧಗೊಳಿಸಿ;
ತಮಗೆ ಬೇಕಾದ ಕ್ರಮಗಳನ್ನು ತೆಗೆದುಕೊಳ್ಳಲು ಸಮುದಾಯವು ಸಮರ್ಥವಾಗಿದ್ದು ಅದರ ಜವಾಬ್ದಾರಿ ಯಾರು ತೆಗೆದುಕೊಳ್ಳಬೇಕೆಂದು ನಿರ್ಧರಿಸಲ್ಲಿದ್ದಾರೆ.ಸಮುದಾಯ ಕಾರ್ಯಕರ್ತರು ಎಲ್ಲರನ್ನೂ ಭಾಗವಹಿಸುವಂತೆ ಪ್ರೇರೇಪಿಸುವುದು ಮತ್ತು ಇತ್ತೀಚಿನ ಮಾಹಿತಿಯ ಆಧಾರದ ಮೇಲೆ ನೈಜ ನಿರ್ಧಾರವನ್ನು ಮಾಡುವಲ್ಲಿ ಮಾರ್ಗದರ್ಶನ ನೀಡುವುದು.

7. ಈ ಸಂದರ್ಭದಲ್ಲಿ ಆಗುತ್ತಿರುವ ಬದಲಾವಣೆಯ ಬಗ್ಗೆ ಜಾಗೃತರಾಗಿರಿ ಮತ್ತು ನಿಮ್ಮ ಯೋಜನೆಯನ್ನು ಅವಶ್ಯಕತೆಗೆ ತಕ್ಕಂತೆ ಹೊಂದಿಸಿಕೊಳ್ಳಿ.
ವೈಯಕ್ತಿಕ ಮತ್ತು ಸಮುದಾಯ ಹಂತದಲ್ಲಿ ಹೇಗೆ ಬದಲಾವಣೆಯಾಗುತ್ತಿದೆ ಎಂಬುದನ್ನು ಗಮನಿಸಿ, ಈ ದಿನದವರೆಗೂ ಆಗಿರುವ ಬೆಳವಣಿಗೆಗಳ ಬಗ್ಗೆ ಮಾಹಿತಿ ನೀಡಲು ಸಮುದಾಯದ ಕಾರ್ಯಕರ್ತರು ನಿರಂತರವಾಗಿ ಸಮುದಾಯದೊಂದಿಗೆ ಸಂಪರ್ಕವನ್ನು ಹೊಂದಿರಬೇಕು.

8. ಒಬ್ಬರನ್ನೊಬ್ಬರು ಗಮನಿಸಿ– ಇತರೆ ಸಹೋದ್ಯೋಗಿಗಳು, ಇತರೆ ಅಂಗವಿಕಲರು, ವೃದ್ಧರು ಮತ್ತು ಸಮುದಾಯದ ನಾಯಕರನ್ನು ಗಮನಿಸಿ. ಇದರಿಂದ ಸಾಂಕ್ರಾಮಿಕ ರೋಗದ ಬಗ್ಗೆ ಜೊತೆಗೂಡಿ ಕೆಲಸ

ಮಾಡಲು ಮತ್ತು ವಿಚಾರವಿನಿಮಯ ಹಂಚಿಕೊಳ್ಳಲು ಮತ್ತು ಕೋವಿಡ್–19 ಬಗೆಗಿನ ಭಯವನ್ನು ಕಡಿಮೆ ಮಾಡುವುದರ ಜೊತೆಗೆ ಸಕಾಲದಲ್ಲಿ ಮಧ್ಯಸ್ಥಿಕೆಯ ಆರೈಕೆಯ ನೆರವನ್ನು ನೀಡಲು ಅನುಕೂಲವಾಗುವುದು.

9. ಮಾಹಿತಿಯನ್ನು ಹಂಚಿಕೊಳ್ಳಿ – ಸಮುದಾಯ ಕಾರ್ಯಕರ್ತರು ಬಹು ಮುಖ್ಯವಾಗಿ ಜನರು, ಸ್ಥಳ, ಕಾಯಿಲೆ, ಯಶಸ್ಸು (ಸಾಧನೆ) ಮತ್ತು ಸವಾಲಿನ ಬಗ್ಗೆ ಉತ್ತಮ ಮಾಹಿತಿಯನ್ನು ಇಟ್ಟುಕೊಳ್ಳುವುದು ಬಹಳ ಮುಖ್ಯ. ಈ ಮಾಹಿತಿಯನ್ನು ಒಂದು ನಿರ್ದಿಷ್ಟ ನಮೂನೆಯಲ್ಲಿ ಸಂಗ್ರಹಿಸಿದರೆ ಸಿಬಿಆರ್ ವ್ಯವಸ್ಥಾಪಕರಿಗೆ, ಸಂಯೋಜಕರಿಗೆ ಮತ್ತು ಸರ್ಕಾರಿ ಅಧಿಕಾರಿಗಳಿಗೆ ವರದಿಯನ್ನು ಶೀಘ್ರವಾಗಿ ಮತ್ತು ನಿಖರವಾಗಿ ನೀಡಲು ಸಾಧ್ಯವಾಗುತ್ತದೆ.

10. ಸಿಬಿಆರ್/ಸಿಬಿಐಡಿ ಕಾರ್ಯಕರ್ತರುಗಳು ಸರ್ಕಾರವು ಕೋವಿಡ್–19 ಸಾಂಕ್ರಾಮಿಕ ರೋಗದಿಂದ ಜನರನ್ನು ರಕ್ಷಿಸಲು ಮತ್ತು ಈ ರೋಗವನ್ನು ತಡೆಗಟ್ಟುವ ಸಲುವಾಗಿ ಗೊತ್ತುಪಡಿಸಿರುವ ಕೆಲವು ನೀತಿ ನಿಯಮಗಳನ್ನು ಕಡ್ಡಾಯವಾಗಿ ಅನುಸರಿಸಬೇಕು.

ಇದಕ್ಕೆ ಸಂಬಂಧಿಸಿದ ಹೆಚ್ಚಿನ ಕ್ರಮಕ್ಕಾಗಿ ಇಲ್ಲಿ ಮಾಹಿತಿಯನ್ನು ಪಡೆಯಬಹುದು

:https://www.who.int/publications-detail/disability-considerations-during-the-covid-19outbreak

ಕನ್ನಡಕ್ಕೆ ಅನುವಾದ – ಆ್ಯಕ್ಷನ್ ಆನ್ ಡಿಸೆಬಿಲಿಟಿ ಅಂಡ್ ಡೆವೆಲಪ್‌ಮೆಂಟ್ ಇಂಡಿಯಾ. ಬೆಂಗಳೂರು.

Produced by Professor Sally Hartley (UK) and Balakrishna Venkatesh (India) with contributions from Christine Cornick, Alick Nyirenda and the Zambian CBR/CBID team, Abdul Busuulwa CAN (Uganda) Professor Gwynneth Lelewellyn (Australia) Elanie Marks (Geneva, WHO - ಭಾರತದ ಸಂದರ್ಭಕ್ಕೆ ತಕ್ಕಂತೆ ಹೊಂದಿಸಲಾಗಿದೆ).